**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 18-03-2024.**

**ಪಾಟೀ ಸವಾಲು - ವಾದಿ ಪರ ವಕೀಲರಿಂದ :**

**1)** ಈ ದಾವೆಯನ್ನು ಸೋಲೂರಿನ 5 ಎಕರೆ ಆಸ್ತಿಯ ಬಗ್ಗೆ ದಾಖಲಿಸಿರುತ್ತಾರೆ. ದಾವಾಸ್ವತ್ತಿನ ಸರ್ವೆ ಸಂಖ್ಯೆ 46-1 ಎ ಪ್ಲಸ್ 1 ಬಿ 3 ಎಕರೆ 26 ಗುಂಟೆ ಹಾಗೂ ಸರ್ವೆ ಸಂಖ್ಯೆ 40-1 ರ 1 ಎಕರೆ 24 ಗುಂಟೆ ಆಗಿರುತ್ತದೆ. ಸದರಿ ಎರಡೂ ಸ್ವತ್ತುಗಳು ಮೂಲತಃ ನಮ್ಮ ತಾಯಿ ಕಾಳಮ್ಮ ಅವರಿಗೆ ಸೇರಿರುತ್ತವೆ. ಅವರ ಹೆಸರಿಗೆ ದಾವಾಸ್ವತ್ತುಗಳು ಇದ್ದವು ಎಂದು ತೋರಿಸಲು ನ್ಯಾಯಾಲಯದ ಡಿಕ್ರಿಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಈವತ್ತಿಗೂ ದಾವಾಸ್ವತ್ತಿನ ಕಂದಾಯ ದಾಖಲೆಗಳು ನಮ್ಮ ತಾಯಿಯ ಹೆಸರಿನಲ್ಲಿ ಇರುತ್ತವೆ. ನಾನು ಪ್ರಥಮ ಪಿ.ಯು.ಸಿ. ಓದಿರುತ್ತೇನೆ. ಕಾಳಮ್ಮ ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ, ನಾನೇ ಅವರ ಮಗ ಎಂದು ನುಡಿಯುತ್ತೇನೆ. ನಮ್ಮ ತಂದೆಯ ಹೆಸರು ಕೆಂಚಪ್ಪ. ನಾನು ಕೆಂಚಪ್ಪ ಮತ್ತು ಕಾಳಮ್ಮ ಅವರ ಮಗ ಎಂದು ತೋರಿಸಲು ನನ್ನ ಜನನ ಪ್ರಮಾಣ ಪತ್ರ, 10 ನೇ ತರಗತಿಯ ಅಂಕಪಟ್ಟಿ ಹಾಗೂ ವರ್ಗಾವಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಆಧಾರ್ ಕಾರ್ಡ್ ಅನ್ನು ಹಾಜರುಪಡಿರುತ್ತೇನೆ ಎಂದು ಸ್ವತಃ ನುಡಿಯುತ್ತೇನೆ. ಸದರಿ ದಾಖಲೆಗಳನ್ನು ಹಾಜರುಪಡಿಸಿದರೆ ನಾನು ಕಾಳಮ್ಮ ಅವರ ಮಗ ಅಲ್ಲ ಎಂದು ನ್ಯಾಯಾಲಯಕ್ಕೆ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾಳಮ್ಮ ಮತ್ತು ಕೆಂಚಪ್ಪ ಅವರ ಮಗ ಅಲ್ಲ, ಯಲಹಂಕದ ತಿಮ್ಮಯ್ಯ ಅವರ ಮಗ ಎಂದರೆ ಸರಿಯಲ್ಲ. ನನಗೆ ನಿ.ಪಿ.1 ರಿಂದ ನಿ.ಪಿ.10 ನ್ನು ತೋರಿಸಲಾಗಿ ಸದರಿ ಕಂದಾಯ ದಾಖಲೆಗಳ ಪ್ರಕಾರ ಕಾಳಮ್ಮ ಅವರ ಹೆಸರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಮೂದು ಇಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಕಾಳಮ್ಮ ಅವರ ತಂದೆಯ ಹೆಸರು ಮುನಿನರಸಪ್ಪ. ನಿ.ಪಿ.1 ರಲ್ಲಿ ಮುನಿನರಸಪ್ಪ ಅವರ ಹೆಸರು

ಇದೆ. ನಿ.ಪಿ.1 ರಲ್ಲಿ ದಾವಾ ಐಟಂ ಸಂಖ್ಯೆ1 ರ ಸರ್ವೆ ಸಂಖ್ಯೆ ನಮೂದು ಇದೆ. ನಿ.ಪಿ.1 ರಿಂದ ನಿ.ಪಿ.10 ರಲ್ಲಿ ಕೆಂಚಪ್ಪ ಮತ್ತು ಕಾಳಮ್ಮ ಅವರ ಹೆಸರು ನಮೂದು ಇಲ್ಲ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ ಮುನಿನರಸಪ್ಪ ಅವರು ಕೋ-ಆಪರೇಟಿವ್ ಪ್ರೈಮರಿ ಲ್ಯಾಂಡ್ ಡೆವೆಲಪ್ಮೆಂಟ್ ಬ್ಯಾಂಕಿಗೆ ಯಾವಾಗ ಎಷ್ಟು ಹಣಕ್ಕೆ ಅಡಮಾನ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಮುನಿನಸರಪ್ಪ ಅವರು ಅಡಮಾನ ಮಾಡಿದ್ದರು. ದಾವಾ ಸ್ವತ್ತು ಮುನಿನರಸಪ್ಪ ಅವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದಂತೆ ದಾವಾ ಸ್ವತ್ತು ಮುನಿನರಸಪ್ಪ ಅವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಕಾಳಮ್ಮ ಅವರು ಅವರ ಜೀವಿತಾವಧಿಯಲ್ಲಿ ಏನೆಲ್ಲಾ ವ್ಯಾವಹಾರ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಅವರು ಯಾರ ಬಳಿ ಎಷ್ಟು ಸಾಲ ಪಡೆದಿದ್ದರು ಹಾಗೂ ಎಷ್ಟು ಹಣ ಮರುಪಾವತಿಸಿದ್ದರು ಇತ್ಯಾದಿ ಹಣಕಾಸಿನ ವ್ಯವಹಾರ ನನಗೆ ಗೊತ್ತಿಲ್ಲ. ಕಾಳಮ್ಮ ಅವರು ಮರುಪಾವತಿಸಿದ ಬ್ಯಾಂಕಿನ ಒಟ್ಟು ಸಾಲದ ಹಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ 2 ನೇ ಪ್ಯಾರಾದಲ್ಲಿ ಹೇಳಿದಂತೆ ಕಾಳಮ್ಮ ಅವರಿಗೆ ಅವರ ಐದು ಜನ ಸಹೋದರರು ಯಾವ ದಿನಾಂಕದಂದು ಎಷ್ಟು ಹಣಕ್ಕೆ ಕರಾರುಪತ್ರವನ್ನು ಮಾಡಿಕೊಟ್ಟರು ಎಂದು ನನಗೆ ಗೊತ್ತಿಲ್ಲ. ಸದರಿ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ನ್ಯಾಯಾಲಯದಲ್ಲಿರುವ ಕಡತಗಳ ದಾಖಲೆಗಳನ್ನು ನೋಡಿ ಕರಾರುಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಆ ರೀತಿ ಯಾವುದೇ ಕರಾರುಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾಸಂಖ್ಯೆ 180-1985, 85-86, 86-86, 77-1986, ಹಾಗೂ 78-86 ನ್ನು ಕರಾರುಪತ್ರದ ಆಧಾರದ ಮೇರೆಗೆ ನಿರ್ದಿಷ್ಟ ಅನುಷ್ಠಾನಕ್ಕಾಗಿ ದಾಖಲಿಸಲಾಗಿದೆ ಎಂದರೆ ಸರಿ. ಸದರಿ ಪ್ರಕರಣಗಳಲ್ಲಿ ಮುಂಗಡ ಹಣವನ್ನು ಮರುಪಾವತಿಸುವಂತೆ ಆದೇಶ

ಆಗಿರುತ್ತದೆ, ಕರಾರಿನ ಪ್ರಕಾರ ಕ್ರಯಪತ್ರ ಮಾಡಿಕೊಡುವಂತೆ ಆದೇಶ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗಳ ಡಿಕ್ರಿ ಪ್ರತಿಗಳನ್ನು ನಾನು ನೋಡಿರುತ್ತೇನೆ. ಸದರಿ ದಾವೆಗಳ ಡಿಕ್ರಿ ಪ್ರಕಾರ ದಾವಾ ಆಸ್ತಿಗಳು ನಮ್ಮ ತಾಯಿಯ ಹೆಸರಿಗೆ ಆಗಿವೆ ಎಂದು ತಿಳಿದುಕೊಂಡಿದ್ದೇನೆ. ಸದರಿ ಪ್ರಕರಣಗಳಲ್ಲಿ ಆಸ್ತಿಗಳನ್ನು ನಮ್ಮ ತಾಯಿಗೆ ಮಾಡಿಕೊಡಬೇಕು ಎಂದು ಡಿಕ್ರಿಯಾಗಿರುತ್ತದೆ. ನಿ.ಡಿ.4 ರ ಪ್ರಕಾರ ನಮ್ಮ ತಾಯಿಗೆ 4,750/- ರೂಪಾಯಿಗಳನ್ನು ಮರುಪಾವತಿಸುವಂತೆ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

**(ವಾದಿಗಳ ಪರ ವಕೀಲರು ಮುಂದುವರೆದ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**